ವ್ಯವಸ್ಥಾಪಕ ನಿರ್ದೇಶಕರ ಕಛೇರಿ
ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಕರ್ನಾಟಕ ಸರ್ಕಾರ

ಕಾವೇರಿ ಭವನ, 9ನೇ ಮಹಡಿ,ಇ ಮತ್ತು ಎಫ್ ಬ್ಲಾಕ್,
ಕೆ.ಜಿ.ರಸ್ತೆ, ಬೆಂಗಳೂರು-560 009
ದೂರವಾಣಿ : 080 2210 6888 ಫ್ಯಾಕ್ಸ್: 080 22247317
ಇ-ಮೇಲ್ : rgrhcl@rediffmail.com

MD RGRHCL 01 PGT 17 2018-19

Date: 01.09.2018

ರಿಗೆ
ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ
ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯಿತಿ

**ತುರ್ತು ಮತ್ತು ಪ್ರಾಮುಖ್ಯ**

ಮಾನ್ಯರೇ,

ವಿಷಯ : ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕೈಬಿಟ್ಟುಹೋದ ವಸತಿ ರಹಿತ ಮತ್ತು ನಿವೇಶನ ರಹಿತರ ಖಾಲಿ ನಿವೇಶನವನ್ನು ಹಾಗೂ ಹಾಲಿ ವಾಸವಾಗಿರುವ ಮನೆಯ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆದು ನಿಗಮದ ವೆಬ್ ಸೈಟಿನಲ್ಲಿ ನಮೂದಿಸಲು ಇಂದಿರಾ ಮನೆ ಮೊಬೈಲ್ ಆಪ್ 2.1 ನ್ನು ಬಿಡುಗಡೆ ಮಾಡಿರುವ ಬಗ್ಗೆ

ಉಲ್ಲೇಖ 1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: No.J-1160/16/2017-RH(M&T) Date:24.01.2018
2. ಸರ್ಕಾರದ ಸುತ್ತೋಲೆ: ವಇ 01 ಹೆಚ್ಎವೈ 2018 ದಿನಾಂಕ: 26.05.2018

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) ಅಡಿಯಲ್ಲಿ ಸಾಮಾಜಿಕ ಆರ್ಥಿಕ ಜಾತಿ ಜನಗಣತಿ 2011 ರ ಪಟ್ಟಿಗೆ ವಸತಿ ರಹಿತರ ಮತ್ತು ನಿವೇಶನ ರಹಿತರನ್ನು ಗುರುತಿಸಿ ಶಾಶ್ವತ ಪಟ್ಟಿಗೆ ಸೇರಿಸುವಂತೆ ಈಗಾಗಲೇ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಅದರಂತೆ, ದಿನಾಂಕ: 31.08.2018 ರಲ್ಲಿ ಇದ್ದಂತೆ ನಿಗಮದ ವೆಬ್ ಸೈಟಿನಲ್ಲಿ ವಸತಿ ರಹಿತರ ಹಾಗೂ ನಿವೇಶನ ರಹಿತರ ವಿವರಗಳನ್ನು ನಮೂದಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

| ವಸತಿ ರಹಿತರು | ನಿವೇಶನ ರಹಿತರು | ಒಟ್ಟು |
|---|---|---|
| 15,75,330 | 6,66,400 | 22,41,730 |

ಉಲ್ಲೇಖಿತ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸುತ್ತೋಲೆಯಂತೆ ಸಮೀಕ್ಷೆಯಲ್ಲಿ ಗುರುತಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರು ಮನೆಯನ್ನು ನಿರ್ಮಿಸಲು ಉದ್ದೇಶಿಸಿರುವ ಖಾಲಿ ನಿವೇಶನ ಹಾಗೂ ಹಾಲಿ ವಾಸಿಸುತ್ತಿರುವ ಮನೆಯ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆದು ಕೇಂದ್ರ ಸರ್ಕಾರಕ್ಕೆ ದಿನಾಂಕ: 15.09.2018 ರೊಳಗಾಗಿ ಸಲ್ಲಿಸಬೇಕಾಗಿರುತ್ತದೆ.

ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆಯಲು "ಇಂದಿರಾ ಮನೆ ಮೊಬೈಲ್ ಆಪ್ 2.1" ವರ್ಷನ್ ನ್ನು ಅಭಿವೃದ್ಧಿ ಪಡಿಸಿ, ಬಿಡುಗಡೆ ಮಾಡಲಾಗಿದೆ. ಸದರಿ ಆಪ್ ಗೂಗಲ್ ಪ್ಲೇ ಸ್ಟೋರ್ ನಲ್ಲಿ ಲಭ್ಯವಿದ್ದು, ಅಪ್ ಡೇಟ್ ಮಾಡಿಕೊಂಡು ವಸತಿ ಯೋಜನೆಯಡಿ ಫಲಾನುಭವಿಗಳ ಪ್ರಗತಿ ಮತ್ತು ಸಮೀಕ್ಷೆಯಲ್ಲಿ ಗುರುತಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರ ಮನೆಯ / ನಿವೇಶನದ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆದು ನಿಗಮದ ವೆಬ್ ಸೈಟಿನಲ್ಲಿ ನಮೂದಿಸಲು ಸದರಿ ಆಪ್ ನ್ನು ಬಳಸುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲು ಕೋರಿದೆ.

**ಸಮೀಕ್ಷೆಯಡಿ ಗುರುತಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರರಿಗೆ ಈ ಕೆಳಗೆ ತಿಳಿಸಲಾದ ಮಾಹಿತಿಯನ್ನು ನಮೂದಿಸದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಈ ವಿವರಗಳನ್ನು ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿದ್ದು, ಮಾಹಿತಿಯನ್ನು ನಮೂದಿಸಿದ್ದಲ್ಲಿ ಮಾತ್ರ ವಸತಿ ರಹಿತರ ಹಾಗೂ ನಿವೇಶನ ರಹಿತರ ವಿವರಗಳು ಜಿಪಿಎಸ್ ಗೆ ಡೌನ್ ಲೋಡ್ ಆಗುತ್ತವೆ.**

ಪು.ತಿ.ನೋ

ಸಮೀಕ್ಷೆಯಲ್ಲಿ ಗುರುತಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರ ವಿವರಗಳನ್ನು ಗ್ರಾಮ ಪಂಚಾಯಿತಿ ಲಾಗಿನ್ ನಲ್ಲಿ ನಮೂದಿಸುವ ಸಂದರ್ಭದಲ್ಲಿ ಈ ಕೆಳಗೆ ತಿಳಿಸಲಾದ ಮಾಹಿತಿಯನ್ನು ನಮೂದಿಸುವುದು.

ಕ್ರಮ ಸಂಖ್ಯೆ: 9 ರ ವಿಧ್ಯಾರ್ಹತೆ

ಕ್ರಮ ಸಂಖ್ಯೆ: 10 ರ ಕುಟುಂಬದಲ್ಲಿ ಯಾರಾದರೂ ಅಂಗವಿಕಲ ಸದಸ್ಯರಿದ್ದಾರೆಯೇ?

ಮೇಲೆ ತಿಳಿಸಿರುವಂತೆ ಮಾಹಿತಿಯನ್ನು ನಮೂದಿಸಿ, ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಈ ಕೆಳಗಿನಂತೆ ಕ್ರಮ ವಹಿಸುವುದು.

1. ನಮೂದಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರನ್ನು ಮತ್ತೊಮ್ಮೆ ಪರಿಶೀಲಿಸಿ, ಯಾವುದಾದರೂ ಅರ್ಹರು ಲಭ್ಯವಿದ್ದಲ್ಲಿ, ಪಟ್ಟಿಗೆ ಸೇರ್ಪಡಿಸಿ ಮತ್ತು ಬಹಳಷ್ಟು ಅರ್ಜಿಗಳಲ್ಲಿ ಕುಟುಂಬದ ಸದಸ್ಯರ ವಿವರಗಳನ್ನು ನಮೂದಿಸದೇ ಇರುವುದು ಕಂಡು ಬಂದಿದ್ದು, ಅದನ್ನು ಸಹ ನಮೂದಿಸುವುದು.
2. ವಸತಿ ರಹಿತರ ಹಾಗೂ ನಿವೇಶನ ರಹಿತರ ಖಾಲಿ ನಿವೇಶನದ ಹಾಗೂ ಹಾಲಿ ವಾಸಿಸುತ್ತಿರುವ ಮನೆಯ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆದು ಅಪ್ ಲೋಡ್ ಮಾಡುವುದು.
3. ಗ್ರಾಮಸಭಾ ಠರಾವು ಹಾಗೂ ಪಟ್ಟಿಯನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಸತಿ ರಹಿತರ ಹಾಗೂ ನಿವೇಶನ ರಹಿತರನ್ನುಗುರುತಿಸುವ ಸಲುವಾಗಿ ನೇಮಕ ಮಾಡಲಾದ ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಸಹಿಯೊಂದಿಗೆ ತಾಲ್ಲೂಕು ಪಂಚಾಯಿತಿಗೆ ನೀಡುವುದು.
4. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಇವರು ಸದರಿ ಪಟ್ಟಿಯನ್ನು ಪರಿಶೀಲಿಸಿ, ಯಾವುದೇ ಅರ್ಹ ಫಲಾನುಭವಿಗಳು ಕೈಬಿಡದಿರುವ ಬಗ್ಗೆ ಹಾಗೂ ಮಾರ್ಗಸೂಚಿಯ ಪ್ರಕಾರ ಎಲ್ಲರೂ ಅರ್ಹರಿರುವ ಬಗ್ಗೆ ಪರಿಶೀಲಿಸುವುದು ಗ್ರಾಮ ಸಭಾ ಠರಾವನ್ನು ಹಾಗೂ ಪಟ್ಟಿಯನ್ನು ದೃಢೀಕರಿಸಿರುವ ಬಗ್ಗೆ ಪರಿಶೀಲಿಸಿ, ತಮ್ಮ ದೃಢೀಕರಣದೊಂದಿಗೆ ಆನ್ ಲೈನ್ ಮೂಲಕ ಜಿಲ್ಲಾ ಪಂಚಾಯಿತಿಗೆ ಅನುಮೋದನೆಗಾಗಿ ರವಾನಿಸುವುದು.
5. ತಾಲ್ಲೂಕು ಪಂಚಾಯಿತಿ ಲಾಗಿನ್ ನಲ್ಲಿ ಗ್ರಾಮಸಭಾ ಠರಾವು ಹಾಗೂ ಪಟ್ಟಿಯನ್ನು ಅಪ್ ಲೋಡ್ ಮಾಡುವುದು.
6. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಇವರು ಪರಿಶೀಲಿಸಿ, ಡಿ.ಎಸ್.ಸಿ ಮೂಲಕ ನಿಗಮಕ್ಕೆ ರವಾನಿಸುವುದು.

ಮೇಲೆ ತಿಳಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ದಿನಾಂಕ: 15.09.2018 ರೊಳಗಾಗಿ ಪೂರ್ಣಗೊಳಿಸುವುದು. ಇನ್ನು ಮುಂದೆ, ವಸತಿ ಯೋಜನೆಯಡಿ ಕಡ್ಡಾಯವಾಗಿ ಇಂದಿರಾ ಮನೆ ಆಪ್ 2.1 ವರ್ಷನ್ ನ್ನು ಕಡ್ಡಾಯವಾಗಿ ಉಪಯೋಗಿಸುವುದು.

<u>ವಿಶೇಷ ಸೂಚನೆ:</u>

ನಿಗಮದಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) ದಡಿ ಗುರುತಿಸಲಾದ ವಸತಿ ರಹಿತರ ಹಾಗೂ ನಿವೇಶನ ರಹಿತರ ಖಾಲಿ ನಿವೇಶನದ ಹಾಗೂ ಹಾಲಿ ವಾಸಿಸುತ್ತಿರುವ ಮನೆಯ ಜಿಪಿಎಸ್ ಆಧಾರಿತ ಛಾಯಾಚಿತ್ರವನ್ನು ತೆಗೆಯುವ Module ನ್ನು ಇಂದಿರಾ ಮನೆ ಮೊಬೈಲ್ ಆಪ್ ನಲ್ಲಿ ಅಳವಡಿಸಿರುವುದರಿಂದ, "<u>ಇಂದಿರಾ ಮನೆ</u> Version 2.1" ನ್ನು Google Play Store ನಿಂದ ಡೌನ್ ಲೋಡ್ ಮಾಡಿ, ಕಾರ್ಯ ನಿರ್ವಹಿಸುವುದು.
ಈಗಾಗಲೇ Version 2.0 ನಲ್ಲಿ ಜಿಪಿಎಸ್ ಆಧಾರಿತ ಛಾಯಾಚಿತ್ರಗಳನ್ನು ಸೆರೆಹಿಡಿದಿದ್ದಲ್ಲಿ, ಅಪ್ ಲೋಡ್ ಮಾಡಿ, ತದನಂತರ Version 2.1 ನ್ನು ಡೌನ್ ಲೋಡ್ ಮಾಡಿಕೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿದೆ.
ಇನ್ನು ಮುಂದೆ ಇಂದಿರಾ ಮನೆ Version 2.0 ನ್ನು ಸ್ಥಗಿತಗೊಳಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ವಿ. ಅನ್ಬುಕುಮಾರ್
ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು: ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.